ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ".

ಅಧ್ಯಕ್ಷರು : ಪ್ರಸ್ತಾವ ಏನೆಂದರೆ,

"1999ರ ಕರ್ನಾಟಕ ಸಾರ್ವಜನಿಕ ಆವರಣಗಳ (ಅನಧಿಕೃತ ಅದಿಭೋಗದಾರರನ್ನು ಹೊರಹಾಕುವ) (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುತ್ತದೆ".

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

ಕರ್ನಾಟಕ ಸಾರ್ವಜನಿಕ ಆವರಣಗಳ (ಅನಧಿಕೃತ ಅದಿಭೋಗದಾರರನ್ನು ಹೊರಹಾಕುವ) (ಎರಡನೇ ತಿದ್ದುಪಡಿ) ವಿಧೇಯಕ, ೧೯೯೯.

ಪರ್ಯಾಲೋಚನಾ ಪ್ರಸ್ತಾವ

+ಶ್ರೀ ಬಿ. ಸೋಮಶೇಖರ್ (ಮಾನ್ಯ ಕಂದಾಯ ಮಂತ್ರಿ) : ಮಾನ್ಯ ಅಧ್ಯಕ್ಷರೆ, "ವಿಧಾನ ಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ, 1999ರ ಕರ್ನಾಟಕ ಸಾರ್ವಜನಿಕ ಆವರಣಗಳ (ಅನಧಿಕೃತ ಅದಿಭೋಗದಾರರನ್ನು ಹೊರಹಾಕುವ) (ಎರಡನೇ ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲ್ಪಟ್ಟಿತು

ಶ್ರೀ ಬಿ. ಸೋಮಶೇಖರ್ (ಕಂದಾಯ ಸಚಿವರು) : ಮಾನ್ಯ ಅಧ್ಯಕ್ಷರೆ, ವಕ್ಫ್ ಇನ್‌ಸ್ಟಿಟ್ಯೂಷನ್‌ನಲ್ಲಿ ಎರಡು ರೀತಿಯಾಗಿವೆ. ಮೊದಲನೆಯದು ಏನೆಂದರೆ, ವಕ್ಫ್ ಬೋರ್ಡ್ ವ್ಯಾಪ್ತಿಗೆ ಬರತಕ್ಕಂಥ ಇನ್‌ಸ್ಟಿಟ್ಯೂಷನ್‌ಗಳು, ಎರಡನೆಯದು ವಕ್ಫ್ ಬೋರ್ಡ್ ಹೊರಗಡೆ ಇರತಕ್ಕಂಥ ಕೆಲವು ರಿಜಿಸ್ಟರ್ಡ್ ಇನ್‌ಸ್ಟಿಟ್ಯೂಷನ್‌ಗಳು. ಬೋರ್ಡ್ ಒಳಗಡೆ ಇರತಕ್ಕಂಥ ಇನ್‌ಸ್ಟಿಟ್ಯೂಷನ್‌ಗಳನ್ನು ಅನಧಿಕೃತವಾಗಿ ಯಾರಾದರೂ ಒಕ್ಕಲೆಬ್ಬಿಸುವಂಥ ಅವಕಾಶ ಇದೆ. ಹಾಗೆಯೇ ವಕ್ಫ್ ಬೋರ್ಡ್ ಹೊರಗಡೆ ಇರತಕ್ಕಂಥ ಇನ್‌ಸ್ಟಿಟ್ಯೂಷನ್‌ಗಳನ್ನು ಅನಧಿಕೃತವಾಗಿ ಕೆಲವರು ಕಬಳಿಸಿಕೊಳ್ಳುತ್ತಿದ್ದಾರೆಂದು ದೂರುಗಳು ಬಂದ ಮೇಲೆ ಅದನ್ನೂ ನಾವು ಒಕ್ಕಲೆಬ್ಬಿಸುವ ಅವಕಾಶವನ್ನು ಕಲ್ಪಿಸಿಕೊಡುತ್ತಿದ್ದೇವೆ outside the wakf board property i.e., directy under the management of wakf board property.

ಶ್ರೀ ಬಿ.ಎ. ಮೊಯಿದ್ದೀನ್ (ಉನ್ನತ ಶಿಕ್ಷಣ ಸಚಿವರು) : ಈ ಬೋರ್ಡ್‌ನಲ್ಲಿ ನಾನು ಮೆಂಬರ್ ಆಗಿದ್ದೇನೆ. ಇದರಲ್ಲಿ ಎರಡು ರೀತಿ ಇದೆ. ಮೊದಲನೆಯದು ಏನೆಂದರೆ, direct administration by Wakf. ಉದಾಹರಣೆಗೆ ಹೇಳುವುದಾದರೆ, ಮಂಡ್ಯದಲ್ಲಿ ಒಂದು ವಕ್ಫ್ ಬೋರ್ಡ್ ಇದೆ. ಇಲ್ಲಿ ಮ್ಯಾನೇಜ್‌ಮೆಂಟ್ ಸರಿಯಾಗಿ ಮಾಡುತ್ತಿಲ್ಲ ಮತ್ತು ಹಣದ ದುರುಪಯೋಗ ನಡೆದಿದೆ. That wakf will come under the direct management of the Wakf.

ಅಲ್ಲಿರತಕ್ಕಂಥ ಮಳಿಗೆಗಳು ಅಥವಾ ಪ್ರಾಪರ್ಟಿಯಲ್ಲಿ ಎನ್‌ಕ್ರೋಚ್‌ಮೆಂಟ್ ಆದಾಗ ಅದನ್ನು ತತ್‌ಕ್ಷಣ ಈ ಆ್ಯಕ್ಟ್ ಅಡಿಯಲ್ಲಿ ಎವಿಕ್ಟ್ ಮಾಡಬಹುದು. ಮ್ಯಾನೇಜ್‌ಮೆಂಟಿನಲ್ಲಿರತಕ್ಕಂಥ ವಕ್ಫ್ ಪ್ರಾಪರ್ಟಿ ರಿಜಿಸ್ಟರ್ಡ್ ವಕ್ಫ್ ಆಗಿದ್ದರೂ ಕೂಡ ಈ ಅವಕಾಶ ಅದಕ್ಕೆ ಇರಲಿಲ್ಲ. ಆದ್ದರಿಂದ ಆ ಒಂದು ಅವಕಾಶವನ್ನು ಈ ತಿದ್ದುಪಡಿಯ ಮೂಲಕ ತರುತ್ತಿದ್ದೇವೆ. ಡೈರೆಕ್ಟ್ ಮ್ಯಾನೇಜ್‌ಮೆಂಟ್ ಅವಕಾಶ ಇತ್ತು, ಇಂಡೈರೆಕ್ಟ್ ಮ್ಯಾನೇಜ್‌ಮೆಂಟ್ ಅವಕಾಶ ಇರಲಿಲ್ಲ. ಆದ್ದರಿಂದ ಈ ಆ್ಯಕ್ಟನ್ನು ತರುತ್ತಿದ್ದೇವೆ.

MR. SPEAKER : ಪ್ರಸ್ತಾವ ಏನೆಂದರೆ, That is a good sign, you trust Mr. Mohiuddin.

"ವಿಧಾನ ಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ 1999ನೇ ಸಾಲಿನ ಸಾರ್ವಜನಿಕ ಆವರಣಗಳ (ಅನಧಿಕೃತ ಅದಿಭೋಗದಾರರನ್ನು ಹೊರ ಹಾಕುವ) (ಎರಡನೇ ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು".

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2

ಅಧ್ಯಕ್ಷರು : ಪ್ರಸ್ತಾವ ಏನೆಂದರೆ : ಖಂಡ 2 ಈ ವಿಧೇಯಕ ಅಂಗವಾಗಿರುತ್ತದೆ".

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2ನ್ನು ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 1 ಇತ್ಯಾದಿ

ಅಧ್ಯಕ್ಷರು : ಪ್ರಸ್ತಾವ ಏನೆಂದರೆ,

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ".

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ
ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಬಿ. ಸೋಮಶೇಖರ್ (ಕಂದಾಯ ಸಚಿವರು) : ಮಾನ್ಯ ಅಧ್ಯಕ್ಷರೆ, "ವಿಧಾನ ಪರಿಷತ್ತಿನಿಂದ

ಅಂಗೀಕೃತವಾದ ರೂಪದಲ್ಲಿರುವ 1999ನೇ ಸಾಲಿನ ಸಾರ್ವಜನಿಕರ ಆವರಣಗಳ (ಅನಧಿಕೃತ ಅಧಿಭೋಗದಾರರನ್ನು ಹೊರ ಹಾಕುವ) (ಎರಡನೇ ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ".

ಅಧ್ಯಕ್ಷರು : ಪ್ರಸ್ತಾವ ಏನೆಂದರೆ,

"ವಿಧಾನ ಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ 1999ನೇ ಸಾಲಿನ ಸಾರ್ವಜನಿಕರ ಆವರಣಗಳ (ಅನಧಿಕೃತ ಅಧಿಭೋಗದಾರರನ್ನು ಹೊರ ಹಾಕುವ) (ಎರಡನೇ ತಿದ್ದುಪಡಿ) ವಿಧೇಯಕವನ್ನು ಮಾಡಿರುವಂತೆ ಅಂಗೀಕರಿಸುವುದು".

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ವಿಧೇಯಕ, 1999

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಬಿ. ಸೋಮಶೇಖರ್ (ಮಾನ್ಯ ಕಂದಾಯ ಸಚಿವರು) : ಮಾನ್ಯ ಅಧ್ಯಕ್ಷರೆ, "ವಿಧಾನ ಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ 1999ನೇ ಸಾಲಿನ ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ".

ಪ್ರಸ್ತಾವವನ್ನು ಮಂಡಿಸಲ್ಪಟ್ಟಿತು

ಶ್ರೀ ಬಿ. ಸೋಮಶೇಖರ್ (ಕಂದಾಯ ಸಚಿವರು) : ಮಾನ್ಯ ಅಧ್ಯಕ್ಷರೆ, ಈ ಮಸೂದೆ ಮೇಲ್ಮನೆಯಲ್ಲಿ ಅಂಗೀಕಾರವಾಗಿ ಈಗ ಈ ಕೆಳಮನೆಗೆ ಬಂದಿದೆ. ನಮ್ಮ ಸರ್ಕಾರ ಮಹತ್ತರವಾದಂಥ, ಐತಿಹಾಸಿಕವಾದಂಥ ತೀರ್ಮಾನವನ್ನು ತೆಗೆದುಕೊಂಡು ಈ ಮಸೂದೆಯನನ್ನು ತಂದಿದೆ. ಸೆಕ್ಷನ್ 94 ಲ್ಯಾಂಡ್ ರೆವಿನ್ಯೂ ಆಕ್ಟ್ ಪ್ರಕಾರ ಸರ್ಕಾರಿ ಜಮೀನಿನಲ್ಲಿ ಯಾರು ಅನಧಿಕೃತವಾಗಿ ಸಾಗುವಳಿ ಮಾಡುತ್ತಿದ್ದಾರೆಯೋ ಅಂಥವರಿಗೆ ಸಾಗುವಳಿ ಚೀಟಿ ಕೊಡತಕ್ಕಂಥದ್ದು ಕಾನೂನಿನಲ್ಲಿದೆ. ಇದೇ ರೀತಿಯಾಗಿ ಸುಮಾರು 25 ರಿಂದ 30 ವರ್ಷಗಳಿಂದ ಸರ್ಕಾರಿ ಜಮೀನಿನಲ್ಲಿ ಕೆಲವು ಬಡವರು ಮನೆಗಳನ್ನು ಕಟ್ಟಿಕೊಂಡಿದ್ದಾರೆ. ಇವತ್ತಿನದಿವಸ ಪ್ರತಿಯೊಂದು ತಾಲ್ಲೂಕಿನಲ್ಲಿಯೂ ಬಡವರು ಸುಮಾರು 5 ರಿಂದ 10 ಸಾವಿರದವರಗೆ ಮನೆಗಳನ್ನು ಕಟ್ಟಿಕೊಂಡಿದ್ದಾರೆ. ಈ ರೀತಿಯಾಗಿ ಕಟ್ಟಿಕೊಂಡಿರತಕ್ಕಂಥ ಮನೆಗಳ ಬೀದಿಗಳೇ ಇವತ್ತು ಇವೆ, ಆದರೆ ಇವುಗಳಿಗೆ ಯಾವುದೇ ರೀತಿಯ ಅಲಿನಿಯೇಷನ್ ಆಗಿಲ್ಲ. ಮತ್ತು ಇವರಿಗೆ ಯಾವುದೇ ರೀತಿಯ ಸವಲತ್ತುಗಳು ಇವತ್ತಿನ ದಿವಸ ಸಿಗುತ್ತಿಲ್ಲ. ಕಾರಣ ಏನೆಂದರೆ, ಅವರ ಮನೆಗಳು ರೆಗ್ಯುಲರೈಜ್ ಆಗಿಲ್ಲ. ಈ ಸಮಸ್ಯೆ ಸುಮಾರು 10-20 ವರ್ಷಗಳಿಂದಲೂ ಹಾಗೆ ಉಳಿದಿದೆ. ಇವರನ್ನು ಈಗ ಹೊರಗಡೆಗೆ ಹಾಕುವುದಕ್ಕೂ ಸಹ ಆಗುವುದಿಲ್ಲ. ಆದ್ದರಿಂದ ಇಂಥವರಿಗೂ ಸಹ ರೆಗ್ಯುಲರೈಜ್ ಮಾಡತಕ್ಕಂಥ ಈ ಒಂದು ಕಾನೂನಿಗೆ ತಿದ್ದುಪಡಿಯನ್ನು ತಂದಿದ್ದೇವೆ. ಒಂದು ತಾಲ್ಲೂಕಿನಲ್ಲಿ ಸುಮಾರು 10 ಸಾವಿರ ಮನೆಗಳಿಂದರೆ, ಇಡೀ ರಾಜ್ಯದಲ್ಲಿ ಸುಮಾರು 10 ಲಕ್ಷ ಕುಟುಂಬಗಳವರಿಗೆ